International Journal of Kannada Research 2019; 5(4): 152-154




International Journal of Kannada Research
www.kannadajournal.com

ISSN: 2454–5813
IJKR 2019; 5(4): 152-154
© 2019 IJKR
www.kannadajournal.com
Received: 19-08-2019
Accepted: 21-09-2019

**ಸಂಜಯಕುಮಾರ ಶಿ ಹಾರೋಬಿಡಿ**
ಸಂಶೋಧನಾ ವಿದ್ಯಾರ್ಥಿ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ

**ಡಾ. ಗಜಾನನ ನಾಯ**
ಸಹಾಯಕ ಪ್ರಾಧ್ಯಾಪಕರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ

**Corresponding Author:**
**ಸಂಜಯಕುಮಾರ ಶಿ ಹಾರೋಬಿಡಿ**
ಸಂಶೋಧನಾ ವಿದ್ಯಾರ್ಥಿ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ

# ಆಧುನಿಕ ಕನ್ನಡ ಕಾದಂಬರಿ ಸಾಹಿತ್ಯ (ಡಾ.ಕೆ.ಎಸ್.ಗಣೇಶಯ್ಯನವರ ಕಾದಂಬರಿಗಳನ್ನು ಅನುಲಕ್ಷಿಸಿ)

**ಸಂಜಯಕುಮಾರ ಶಿ ಹಾರೋಬಿಡಿ, ಡಾ. ಗಜಾನನ ನಾಯ**

ಕನ್ನಡ ಸಾಹಿತ್ಯ ಚರಿತ್ರೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಪರಂಪರೆಯನ್ನು ಹೊಂದಿದೆ. ಭಾಷಾ ವೈವಿಧ್ಯತೆಯ ದೃಷ್ಟಿಯಿಂದ ಹಲವು ಬಗೆಗಳಲ್ಲಿ ಪರಿವರ್ತನೆಗಳಾಗಿರುವುದನ್ನು ಕಾಣುತ್ತೇವೆ. ಸಮಕಾಲಿನವಾಗಿ ಚಾಲ್ತಿಯಲ್ಲಿದ್ದ ಭಾಷೆ, ಸಂಸ್ಕೃತಿ, ಬರವಣಿಗೆಯ ಮಾಧ್ಯಮಗಳು ವೈಶಿಷ್ಟ್ಯಪೂರ್ಣವಾಗಿದೆ. ಈ ಬಗೆಯ ಸಾಹಿತ್ಯವನ್ನು ಪ್ರಮುಖವಾಗಿ ನಾಲ್ಕು ಪ್ರಕಾರಗಳಲ್ಲಿ ವಿಭಾಗ ಕ್ರಮ ಮಾಡಿರುವುದು ಗಮನಾರ್ಹ ಅಂಶ. ಕೊನೆಯ ಕಾಲಘಟ್ಟವೇ ಆಧುನಿಕ ಕನ್ನಡ ಸಾಹಿತ್ಯ. ಆಯಾ ಕಾಲದ ಸಾಹಿತ್ಯ ತನ್ನದೇ ಆದ ವೈಶಿಷ್ಟ್ಯತೆಯೊಂದಿಗೆ ಬೆಳೆದು ಬಂದಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರವು ಅನೇಕ ವೈವಿಧ್ಯತೆಯೊಂದಿಗೆ ಕೂಡಿರುವಂತದ್ದು. ಈ ಕಾಲ ಘಟ್ಟದ ತನಕ ಕಾವ್ಯಗಳು ಹೆಚ್ಚು ಪ್ರಧಾನವಾಗಿದ್ದವು. ಗದ್ಯ ಪದ್ಯದೊಂದಿಗೆ ಕಾವ್ಯ ಮಿಳಿತಗೊಂಡು ಸಾಹಿತ್ಯ ಬೆಳೆದು ಬಂದಿತು. ನಡುಗನ್ನಡದ ಕಾಲಘಟ್ಟದಲ್ಲಿ ಗೇಯ ರೂಪದಲ್ಲಿ ವಚನಗಳು, ಕೀರ್ತನೆಗಳು ರಚನೆಯಾಗಿರುವುದನ್ನು ಕಾಣುತ್ತೇವೆ. 18ನೇ ಶತಮಾನದ ಉತ್ತರಾರ್ಧದ ಅವಧಿಯಲ್ಲಿ ಕಾವ್ಯದ ಜೊತೆಗೆ ಕಾದಂಬರಿ ಕ್ಷೇತ್ರ ಹೆಚ್ಚು ವಿಸ್ತಾರವನ್ನು ಪಡೆಯಿತು. ಕನ್ನಡ ಸಾಹಿತ್ಯ ಅನೇಕ ಕಾಲಘಟ್ಟಗಳಲ್ಲಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಆಯಾ ಕಾಲ ಘಟ್ಟದ ಸಾಮಾಜಿಕ ಜೀವನ, ನಂಬಿಕೆಗಳು, ಆಚಾರ, ವಿಚಾರಗಳು ಸುಧಾರಣಾವಾದದ ಹಿನ್ನಲೆಯಲ್ಲಿ ರಚನೆಗೊಂಡಂತವುಗಳು. ಅವುಗಳಲ್ಲಿ ಬಂಡಾಯ ಸಾಹಿತ್ಯ ಮತ್ತು ಬಂಡಾಯೋತ್ತರ ಅವಧಿ ಮಹತ್ವದ ಕಾಲ ಘಟ್ಟವಾಗಿದೆ. ಇದಕ್ಕೆ ಪ್ರಮುಖ ಕಾರಣ ಶೋಷಿತರ, ನೊಂದವರ ಭವನೆಗಳನ್ನು ಸಮಾಜದ ಮುಂದೆ ತೊರ್ಪಡಿಸುವುದು. ವ್ಯಕ್ತಿಗತವಾಗಿದ್ದ ಸಾಹಿತ್ಯಕ್ಕೆ ಹೊರತಾದ ಸಮಾಜವಾದಿ ನೆಲೆಯಲ್ಲಿ ಆಲೋಚಿಸಿ ಪ್ರತಿಯೊಬ್ಬ ಮನುಷ್ಯನ ಹಿತಾಸಕ್ತಿಯನ್ನು ಎತ್ತಿ ತೋರುವ ಸಾಹಿತ್ಯದ ಪ್ರಮುಖ ಪ್ರಕಾರವಾಗಿ ಬೆಳೆದು ಬಂದಿತು. ಈ ಬಗೆಯ ಸಾಹಿತ್ತೀಕ ಅಂಶಗಳು ಕೃತಿ ರಚನೆಯಲ್ಲಿ ತುಂಬ ಮಹತ್ವವನ್ನು ಪಡೆದುಕೊಂಡವು.

ಸಾಹಿತ್ಯ ಯಾವತ್ತು ನಿಂತ ನೀರಲ್ಲ. ಸದಾ ಹೊಸತನದೊಂದಿಗೆ ಮುಖಾಮುಖಿಯಾಗುತ್ತ ಸಾಗುವವಂತದ್ದು. ಸಮಕಾಲಿನ ಸಂದರ್ಭಕ್ಕೆ ತಕ್ಕಂತೆ ಸಾಹಿತ್ಯ ಸ್ಪಂದಿಸುತ್ತದೆ. ವ್ಯಕ್ತಿಗತವಾದ ಅನುಭವಗಳು ಸಮೂದಾಯವನ್ನು ಕೇಂದ್ರವಾಗಿಟ್ಟುಕೊಂಡು ರಚನೆಯಾಗುತ್ತವೆ. ಸಾಹಿತಿ ಸಾಹಿತ್ಯ ಸದಾ ಹೊಸ ಚಿಂತನೆಗಳೊಂದಿಗೆ ಬೆಳೆದು ಬರುವಂತದ್ದು. ಈ ಪ್ರಕ್ರಿಯೆಯನ್ನು ಗುರುತಿಸುವುದು ಚಿಂತನಶೀಲ ಮನಸ್ಸುಳ್ಳವರು. ಇಂದು ಹಲವು ವೈಶಿಷ್ಟ್ಯತೆಗಳಿಂದ ಕೂಡಿದ ಸಾಹಿತ್ಯ ಬೆಳೆದು ಬರುತ್ತಿದೆ. ಕಾದಂಬರಿ ಸಾಹಿತ್ಯದಲ್ಲಿ ಹೊಸ ಪ್ರಯೋಗಗಳು ಆಗುತ್ತಿರುವುದು ಗಮನಾರ್ಹ ಅಂಶ. ಕಾಲಮಾನದ ದೃಷ್ಟಿಯಿಂದ ಆಯಾ ಕಾಲಕ್ಕೆ ಸಂಬಂಧಿಸಿದಂತೆ ವಸ್ತು ವಿಷಯಗಳನ್ನು, ತಂತ್ರಗಾರಿಕೆಯನ್ನು, ಭಾಷಾ ಶೈಲಿಯನ್ನು ಬದಲಾಯಿಸುತ್ತ ಬಂದಿರುವುದನ್ನು ಅಧ್ಯಯನಿಸಬಹುದು.

‘‘ಸಾಹಿತ್ಯ ಪ್ರಕಾರಗಳಲೆಲ್ಲ ಅತ್ಯಂತ ಸ್ವತಂತ್ರ್ಯವಾದದ್ದು, ಅತ್ಯಂತ ಸ್ಥಿತಿ ಸ್ಥಾಪಕತ್ವ ಗುಣವುಳ್ಳದ್ದು, ಅತ್ಯಂತ ಪ್ರಚಂಡವಾದದ್ದು’’ ಕಾದಂಬರಿ ಎಂದು ಹೆನ್ರಿ ಜೇಮ್ಸ್ ಅಭಿಪ್ರಾಯ ಪಡುತ್ತಾರೆ. ಕನ್ನಡದ ವಿದ್ವಾಂಸರು ಕಾದಂಬರಿ ಕ್ಷೇತ್ರ ವಿಶಾಲವಾಗಿರುವಂತದ್ದು. ಲೇಖಕ ತಾನು ಹೇಳುವ ವಿಷಯವನ್ನು ವಿಸ್ತರಿಸಿಕೊಳ್ಳಲು ಅವಕಾಶವಿದೆ ಎಂಬ ಮಾತುಗಳನ್ನಾಡಿದ್ದಾರೆ. ಕಾದಂಬರಿಯ ಕಥೆಯ ನಿರೂಪಣೆಯಲ್ಲಿ ಈ ಅಂಶವನ್ನು ಗುರುತಿಸಬಹುದು. ಕಥೆಯ ಪ್ರಾರಂಭ, ಮದ್ಯ, ಅಂತ್ಯಗಳು ಅನೇಕ ಕವಲುಗಳಲ್ಲಿ ಚಾಚಿಕೊಂಡಿರುತ್ತವೆ. ಮೂಲದಲ್ಲಿ ಒಂದು ಕಥೆ ಪ್ರಾರಂಭವಾಗಿದ್ದರೆ, ಮದ್ಯದಲ್ಲಿ ಅದು ಕೊಂಡಿಯಾಗಿ ಬೆಳೆದುಕೊಳ್ಳುತ್ತದೆ.

ಪ್ರಾರಂಭ ಮತ್ತು ಮದ್ಯಗಳ ನಡುವೆ ಅನೇಕ ಸಂಗತಿಗಳು ಬಂದು ಹೋಗಿರುತ್ತವೆ. ಕನ್ನಡದ ಹಲವು ಬಗೆಗಳ ಕಾದಂಬರಿಗಳಲ್ಲಿ ಪೂರಕವಾಗಿ ಈ ಅಂಶಗಳನ್ನು ಕಾಣುತ್ತೇವೆ. ಸೃಜನಶೀಲ ಬರಹಗಾರ ತನ್ನ ಅಂತರಂಗದ ಭಾವನೆಗಳನ್ನು ಬರವಣಿಗೆಯಲ್ಲಿ ಮೂಡಿಸಿರುತ್ತಾನೆ. ಅದು ಸಾಮಾನ್ಯ ವ್ಯಕ್ತಿ ಅನುಭವಿಸಿದ್ದರೂ ಕೂಡಾ ವ್ಯಕ್ತಪಡಿಸಲಾಗದ ವಿಶಿಷ್ಟ ಭಾವಗಳು. ಅದನ್ನು ತನ್ನ ಬರವಣಿಗೆಗಳಲ್ಲಿ ವ್ಯಕ್ತಪಡಿಸಿರುತ್ತಾನೆ.

ಖ್ಯಾತ ವಿಮರ್ಷಕರಾದ ಡಿ.ಆರ್. ನಾಗರಾಜ ಅವರು ಕಾದಂಬರಿ ರಚನೆಯಾಗುವ ಬಗೆಯ ಕುರಿತು "ಆಳುವವನು ಮತ್ತು ಆಳಿಸಿಕೊಳ್ಳುವವನ ಸಂಘರ್ಷದ ಸಂದರ್ಭದಲ್ಲಿ ಕಾದಂಬರಿ ಹುಟ್ಟುತ್ತದೆ" ಎಂದಿದ್ದಾರೆ. ಈ ಹೇಳಿಕೆ ಬಂಡಾಯ ಸಾಹಿತ್ಯ ರಚನೆಗೆ ಕಾರಣವಾದ ಮನೋಧರ್ಮವನ್ನು ಸೂಚಿಸುವಂತಿದೆ.

**ಕನ್ನಡ ಕಾದಂಬರಿ ಸ್ವರೂಪದಲ್ಲಾದ ಪಲ್ಲಟಗಳು:**

ಒಂದು ಕಾಲದಲ್ಲಿ ಕಾದಂಬರಿಗಳು ನಿರ್ದಿಷ್ಟವಾದ ಚೌಕಟ್ಟಿನಲ್ಲಿ ರಚನೆಯಾಗುತ್ತಿದ್ದವು. ವಸಾಹತುಶಾಹಿ ಕಾಲಘಟ್ಟದ ದಟ್ಟ ಪ್ರಭಾವ ನವೋದಯ ಸಾಹಿತ್ಯದ ಮೇಲೆ ಬೀರಿದೆ. ವಸ್ತು ವಿಷಯವು ಕೂಡ ಅದು ರಚನೆಯಾದ ಕಾಲದ ಸಮಕಾಲಿನ ಸನ್ನಿವೇಶವನ್ನು ಕಟ್ಟಿಕೊಡುತ್ತಿದ್ದವು. ಕಲ್ಪನೆಗಿಂತ ವಾಸ್ತವದ ಸಹಜ ಸನ್ನಿವೇಶಗಳು ಕಾದಂಬರಿಗಳಲ್ಲಿ ಅಭಿವ್ಯಕ್ತವಾಗುತ್ತಿದ್ದವು. ಸೃಜನಶೀಲತೆಯ ಜೊತೆಯಲ್ಲೆ ಅದು ವಾಸ್ತವದ ಪ್ರತಿಬಿಂಬ ಎನ್ನುವಂತೆ ಓದುಗನಿಗೆ ಅನಿಸುತ್ತಿತ್ತು. ಅಂತರಾಷ್ಟ್ರೀಯ ಮಟ್ಟದ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡವರು ಈ ಕ್ರಮವನ್ನು ಹೆಚ್ಚು ಅಳವಡಿಸಿಕೊಂಡರು. ಮುಂದೆ ಈ ತಂತ್ರಗಾರಿಕೆಯನ್ನು ಅನುಸರಿಸಿ ಹೊಸ ಲೇಖಕರು ಬರವಣಿಗೆಯಲ್ಲಿ ತೊಡಗಿಸಿಕೊಂಡರು. ಸರಿ ಸುಮಾರು ದಶಕಗಳವರೆಗೆ ಈ ಮಾದರಿಯನ್ನು ಅನುಸರಿಸಿದ ಕಾದಂಬರಿ ಸಾಹಿತ್ಯ 21ನೇ ದಶಕಗಳಿಗೆ ಬಂದಂತೆ ತೀರ ಹೊಸ ಮಾದರಿಯೊಂದನ್ನು ಸೃಷ್ಟಿಸಿಕೊಂಡಿತು. ಇತ್ತೀಚಿನ ದಿನಗಳಲ್ಲಿ ರಚನೆಯಾದ ಕಾದಂಬರಿ ಸಾಹಿತ್ಯದಲ್ಲಿ ಕೆಲವು ಪ್ರಮುಖ ಪಲ್ಲಟಗಳಾಗಿರುವುದನ್ನು ಗುರುತಿಸುವ ಪ್ರಯತ್ನ ಈ ಪ್ರಬಂಧದಲ್ಲಿ ಮಾಡಿದ್ದೇನೆ.

ಇತರೆ ಸಾಹಿತ್ಯ ಪ್ರಕಾರಗಳಲ್ಲಿಯೂ ಗಣನೀಯ ಬದಲಾವಣೆಗಳು ಕಂಡು ಬರುತ್ತಿವೆ. ಅವೆಲ್ಲವುಗಳಿಗಿಂತ ಕಾದಂಬರಿ ಬರಹದಲ್ಲಿ ವಿಶೇಷವಾದ ಬದಲಾವಣೆಗಳು ಅಧ್ಯಯನದ ವಿಷಯವಾಗಿದೆ. ವಸ್ತು, ತಂತ್ರ, ಭಾಷಾ ಶೈಲಿಯಲ್ಲಿ ಸಾಕಷ್ಟು ಪ್ರಮಾಣದ ವಿಭಿನ್ನವಾದ ಪ್ರಯೋಗಗಳು ನಡೆಯುತ್ತಿದ್ದು ಜನಪ್ರೀಯತೆಗೆ ಕಾರಣವಾಗಿದೆ. ಕನ್ನಡ ಸಾಹಿತ್ಯದಲ್ಲಿ ಬಂಡಾಯದ ಬರಹಗಾರರ ನಂತರ ಕನ್ನಡದಲ್ಲಿ ಇತರೆ ಭಾಷೆ, ಕ್ಷೇತ್ರದ ಬರಹಗಾರರು ಹೆಚ್ಚಾಗಿ ಬರವಣಿಗೆಗಳಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ಹೊಸ ತಲೆಮಾರಿನ ಬರಹಗಾರರ ಸಾಹಿತ್ಯ ಭಿನ್ನವಾದ ದೃಷ್ಟಿಕೋನಗಳಿಂದ ಮೂಡಿ ಬಂದಿರುವುದನ್ನು ಅವಲೋಕಿಸಬಹುದಾಗಿದೆ.

ಸೃಜನಶೀಲ ಕೃತಿ ರೂಪಗೊಳ್ಳುವ ಬಗ್ಗೆ "ಕೃತಿ ನಿರ್ಮಿತಿಗೆ ವಸ್ತುವೊಂದೆ ಕಾರಣವಲ್ಲ. ಒಂದು ವಿಚಾರ, ಒಂದು ಅನುಭವ, ಕಿಡಿ ರೂಪದ ಒಂದು ಹೊಳಹು ಕೂಡ ಕಾರಣವಾಗಬಹುದು. ಕೃತಿಯ ವಸ್ತು ಎನ್ನುವುದು ಕಥೆ ಅಥವಾ ಘಟನೆ ಆಗಬೇಕಿಲ್ಲ ಒಂದು ವಿಚಾರವು ಆಗಬಹುದು" ಎಂದು ರೆಹಮತ್ ತರಿಕೆರೆ ಅಭಿಪ್ರಾಯ ಪಡುತ್ತಾರೆ. (ರಹಮತ್ ತರಿಕೆರೆ–ಇಲ್ಲಿ ಯಾರು ಮುಖ್ಯರಲ್ಲ– ಕನ್ನಡ ಸಾಹಿತ್ಯ ಮಿಮಾಂಸೆ, ಲಡಾಯಿ ಪ್ರಕಾಶನ ಗದಗ, 2011, ಪು 1) ಹೊಸ ತಲೆಮಾರಿನ ಬರವಣಿಗೆಯ ಲೇಖಕ ಮತ್ತು ಕೃತಿಯ ಒಳನೋಟಗಳ ಹೊಳಹುಗಳನ್ನು ಈ ಹೇಳಿಕೆಯಲ್ಲಿ ಗುರುತಿಸಬಹುದು.

ಲೇಖಕರ ಸೃಜನಶೀಲ ಬರವಣಿಗೆಗಳಿಗೆ ಇಂತಹದೇ ವಸ್ತುವಾಗಬೇಕೆಂಬ ನಿರ್ಭಂದವಿಲ್ಲ, ಸೂತ್ರ ಬದ್ಧವಾಗಿರಬೇಕೆಂಬ ನಿಯಮಗಳು ಕೂಡಾ ಅನ್ವಯವಾದಂತಿಲ್ಲ. ವೈಜ್ಞಾನಿಕ ಕ್ಷೇತ್ರ, ಇತಿಹಾಸ, ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನೆ ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ವಿಶೇಷವಾದ ಕಾದಂಬರಿ ಪ್ರಕಾರವನ್ನು ಹುಟ್ಟು ಹಾಕಿದ್ದಾರೆ. ಈ ಪ್ರಕ್ರಿಯೆಯಲ್ಲಿ ಲೇಖಕರು ತಮ್ಮ ಕಥನ ಕ್ರಮದಲ್ಲಿ ವಸ್ತುವನ್ನು ನಿರೂಪಿಸಲು ಪಟ್ಟ ಕಷ್ಟಗಳು ಮಾಸ್ತಿಯವರಿಂದ ಆಧುನಿಕ ಕಾಲದ ಎಲ್ಲ ಲೇಖಕರ ಬರವಣಿಗೆಗಳಲ್ಲಿ ಕಾಣಬಹುದು.

ಆಧುನಿಕ ಕನ್ನಡ ಕಾದಂಬರಿ ಪ್ರಕಾರದಲ್ಲಿ ಭಾಷೆ, ಪದಗಳ ಬಳಕೆ, ಕಥಾ ನಿರೂಪಣೆ, ಹೀಗೆ ಒಟ್ಟಾರೆ ಕಾದಂಬರಿಗೆ ಇರಬೇಕಾದ ಎಲ್ಲ ರೀತಿಯ ಅವಶ್ಯಕ ಅಂಶಗಳಲ್ಲಿ ಆದ ಬದಲಾವಣೆಗಳನ್ನು ಈ ಲೇಖನದಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಕೆ.ಎನ್. ಗಣೇಶಯ್ಯನವರ ಒಟ್ಟಾರೆ ಕಾದಂಬರಿಗಳು ಸಾಹಿತ್ಯದಲ್ಲಿ ಆದ ಪಲ್ಲಟಗಳನ್ನು ಗುರುತಿಸಲು ಪ್ರಮುಖವಾದ ವಸ್ತು ವಿಷಯವನ್ನು ಒದಗಿಸಿ ಕೊಡುತ್ತವೆ. ಇಂದಿನ ದಿನಗಳಲ್ಲಿ ಕಾದಂಬರಿಯ ರೂಪವನ್ನು ವಿಭಿನ್ನವಾದ ದೃಷ್ಟಿಕೋನದಿಂದ ರಚಿಸುವುದನ್ನು ಗಮನಿಸಿದರೆ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರಕ್ಕೆ ತನ್ನದೆ ಆದ ತಂತ್ರಗಾರಿಕೆಯನ್ನು, ನವೀನ ಪ್ರಯೋಗಾರಿಕೆಯನ್ನು ಬಳಕೆ ಮಾಡಿದವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಆಧುನಿಕ ಕಾಲದಲ್ಲಿನ ಕನ್ನಡ ಸಾಹಿತ್ಯದಲ್ಲಿ ಬದಲಾವಣೆಗಳು ಕಾದಂಬರಿ ಪ್ರಪಂಚವನ್ನ ವಿಶಿಷ್ಟವಾದ ರೀತಿಯಲ್ಲಿ ಬೆಳೆದು ಬರುವಂತೆ ಮಾಡಿವೆ ಎಂಬುದನ್ನು ಕಂಡುಕೊಳ್ಳಬಹುದು.

ಸಾಹಿತ್ಯ ಅಧ್ಯಯನ ಕ್ರಮದಲ್ಲಿ ವಸ್ತುವಿನ ಕುರಿತಾದ ಜಿಜ್ಞಾಸೆ ಪ್ರಾಚೀನ ಕಾಲದ ಕಡೆಗೆ ನಮ್ಮನ್ನು ಕೊಡೊಯ್ಯುತ್ತದೆ. ಅಂದಿನ ಕಾಲದಲ್ಲಿಯೇ ಯಾವ ವಸ್ತುವನ್ನು ತೆಗೆದುಕೊಂಡು ಕೃತಿ ರಚನೆ ಮಾಡಿದರೆ ಸಾಹಿತ್ಯ ವಲಯಕ್ಕೆ ಮತ್ತು ವಿದ್ವಾಂಸರ ಅಂಗಳದಲ್ಲಿ ಚರ್ಚೆಗೊಳಗಾಗುತ್ತದೆ ಎಂಬುದು ಕೂಡ ಬಹಳ ಸ್ಪಷ್ಟವಾಗಿ ಅರಿತು ಕೃತಿ ರಚನೆಗೆ ತೊಡಗಿರುವುದನ್ನು ಕಾಣುತ್ತೇವೆ. ಈ ಬಗೆಯ ಕ್ರಮ ಸಾಹಿತ್ಯಕ್ಕೆ ಇದ್ದ ಮಹತ್ವವನ್ನು ತೋರ್ಪಡಿಸುತ್ತದೆ. ವಸ್ತು ವಿಷಯವಾಗಿ ಹರಿಹರ ಆತನ ಸೋದರಳಿಯ ರಾಘವಾಂಕನ ನಡುವೆ ನಡೆದ ಸಂವಾದ ಪ್ರಕರಣವೇ ನಿದರ್ಶನವಾಗಿದೆ. ಅದೊಂದನ್ನೆ ನಾವು ವಸ್ತುವಿನ ಬಗ್ಗೆ ಇದ್ದ ವಿರೋದ ಎಂದು ಪರಿಗಣಿಸಲಾಗುವುದಿಲ್ಲ. ಸ್ವತ: ಆತನೆ ಒಂದು ಲೌಖಿಕ ಮತ್ತೊಂದು ಅಲೌಖಿಕ ಕಾವ್ಯವನ್ನು ಬರೆದು ಪ್ರಸಿದ್ಧನಾಗಿದ್ದಾನೆ.

ಆಧುನಿಕ ಕಾಲಘಟ್ಟಕ್ಕೆ ಬಂದಾಗ ಈ ಯಾವ ಧೋರಣೆಗಳನ್ನು ಕಾಣುವುದಿಲ್ಲ. ಲೇಖಕನ ವಯಕ್ತಿಕ ವಿಚಾರವಾಗಿ ಅದು ರೂಪಗೊಳ್ಳುವ ಬಗೆಯನ್ನು ಕಾಣುತ್ತೇವೆ. ಕೆ ಎನ್ ಗಣೇಶಯ್ಯನವರ ಕಾದಂಬರಿಗಳು ವಸ್ತುವಿನ ದೃಷ್ಟಿಯಿಂದ ವೈವಿಧ್ಯಮಯವಾಗಿ ಮೂಡಿ ಬಂದಿವೆ. ಅವರ ಕಾದಂಬರಿಗಳ ಶಿರ್ಷಿಕೆಯೆ ಓದುಗರನ್ನು ಆಕರ್ಷಿಸುತ್ತವೆ. ಇಡಿ ಕಾದಂಬರಿಯ ಒಟ್ಟು ಕಥೆ ಶಿರ್ಷಿಕೆಯ ಸುತ್ತ ಕೇಂದ್ರೀಕೃತವಾಗಿರುವುದು ವೈಶಿಷ್ಟ್ಯ ಪೂರ್ಣವಾಗಿದೆ. ಸಾಹಿತ್ಯ ಕ್ಷೇತ್ರಕ್ಕೆ ಅವರು ಪ್ರವೇಶ ಪಡೆದದ್ದು ಕಥೆಗಳ ಮೂಲಕ. 'ಶಾಲ ಭಂಜಿಕೆ' ಅವರ ಮೊದಲ ಕಥಾ ಸಂಕಲನ. ಈ ಕಥೆಗೆ ಓದುಗರಿಂದ ಬಂದ ಅಭಿಪ್ರಾಯಗಳು ಅವರನ್ನು ಈ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿತು.

**ಕಾದಂಬರಿ ಬರವಣಿಗೆಯ ವೈಶಿಷ್ಟ್ಯತೆ :** ಕೆ ಎನ್ ಗಣೇಶಯ್ಯನವರು ತಳಿ ಶಾಸ್ತ್ರದ ಪ್ರಾಧ್ಯಾಪಕರು. ವೈಜ್ಞಾನಿಕ ಸಂಶೋಧನಾ ವೃತ್ತಿಯಲ್ಲಿ ತೊಡಗಿಕೊಂಡವರು. ವೃತ್ತಿಯ ಪ್ರಭಾವ ಸಾಹಿತ್ಯ ಕೃತಿಗಳ ಮೇಲಾಗಿರುವುದನ್ನು ಕಾಣುತ್ತೇವೆ. ಕಥನ ನಿರೂಪಣೆಗೆ ಅನೇಕ ಆಕರಗಳನ್ನು ಬಳಸಿಕೊಳ್ಳುತ್ತಾರೆ. ಭಾಷಾ ಸಂಕೇತಗಳ ಮೂಲಕ ನಿಗೂಢತೆಯನ್ನು ಹೇಳುತ್ತ ಓದುಗರಲ್ಲಿ ಕುತೂಹಲವನ್ನುಂಟು ಮಾಡುತ್ತವೆ. ಆಧುನಿಕ ಸಂವಹನ ಮಾಧ್ಯಮಗಳಾದ ಇಮೇಲ್, ಇಂಟರ್ನೆಟ್, ಇಲೆಕ್ಟ್ರಾನಿಕ್ ವಸ್ತುಗಳಾದ ಪೆನ್ ಡ್ರೈವ್, ಕ್ಯಾಮರಾಗಳ ಮೂಲಕ ಕಥೆ ಹೇಳುವ ಶೈಲಿಯನ್ನು ಕಾಣುತ್ತೇವೆ. ಕಾದಂಬರಿಗಳು ಐತಿಹಾಸಿಕ ವಿಷಯ ವಸ್ತುವನ್ನು ಆಧರಿಸಿ ರಚನೆಗಳಾಗಿವೆ. ಈ ಮಾದರಿಯ ಬರಹಗಳು ಅವರಲ್ಲಿರುವ ಭಿನ್ನವಾದ ವೈಚಾರಿಕ ಬರವಣಿಗೆಯನ್ನು ಗುರುತಿಸಿಕೊಳ್ಳುವಲ್ಲಿ ಸಹಕಾರಿಯಾಗಿವೆ. ಐತಿಹಾಸಿಕ ವಿಷಯ ವಸ್ತುವನ್ನು ಕಾದಂಬರಿ ರೂಪಕ್ಕೆ ತರುವುದು ಅಷ್ಟು ಸುಲಭದ ಕೆಲಸವಲ್ಲ. ಹಲವು ವ್ಯಕ್ತಿ, ಸಮೂದಾಯ, ಒಂದಲ್ಲ ಒಂದು ರೀತಿಯಲ್ಲಿ ಚಾರಿತ್ರಿಕ ಘಟನೆಗಳಿಗೆ ಸಂಬಂಧ ಹೊಂದಿರುತ್ತವೆ. ಹೀಗಾಗಿ ಚರಿತ್ರೆಯನ್ನು ಕಥೆಯ ರೂಪಕ್ಕೆ ತರುವಲ್ಲಿ ಬರಹಗಾರನ ವೈಚಾರಿಕತೆ ವಿಶಿಷ್ಟ ರೀತಿಯಲ್ಲಿ ಒಡ ಮೂಡಿ ಬಂದಿರುತ್ತದೆ.

ಇಷ್ಟೆಲ್ಲ ತೊಡಕುಗಳ ಮಧ್ಯ ಐತಿಹಾಸಿಕ ಸಂಗತಿಗಳಿಗೆ ಸೃಜನಾತ್ಮಕವಾಗಿ ಒಂದು ರೂಪವನ್ನು ನೀಡುವಲ್ಲಿ ಇವರ ಬರವಣಿಗೆ ಯಶಸ್ವೀಯಾಗಿದೆ. ಕೆಲವು ಸಹೃದಯ ವಲಯದಿಂದ ಬಂದ ಪ್ರತಿಕ್ರಿಯೆಗಳು ಲೇಖಕರನ್ನೆ ಬೆರಗುಗೊಳಿಸಿರುವುದು ಅವರ ಕಥನ ಕ್ರಿಯೆ ಎಷ್ಟೊಂದು ಪ್ರಭಾವಕಾರಿಯಾಗಿರುತ್ತದೆ ಎಂಬುದಕ್ಕೆ ಸಾಕ್ಷೀಯಾಗಿವೆ. ಕನ್ನಡದ ಹೆಸರಾಂತ ವಿಮರ್ಶಕರು, ಚಿಂತಕರು ಆದ ಓ ಎಲ್ ನಾಗಭೂಷಣ ಸ್ವಾಮಿ ಅವರು ಕಂಡಿರುವಂತೆ ಕನ್ನಡದ ಮಟ್ಟಿಗೆ ಅಂತಹ ಕಥನ ಶೈಲಿಯನ್ನು ಇವರೆಗೆ

ಯಾರೂ ಕೂಡ ಬಳಸದೆ ಇರುವುದು ಅವರೊಂದು ವಿಶಿಷ್ಟ ಬಗೆಯ ಬರಹಗಾರರು ಎಂಬುದನ್ನು ನಿರೂಪಿಸುತ್ತದೆ.

ಇಂಗ್ಲಿಷ ಬರಹಗಾರರ ಕಥನ ಕ್ರಮವನ್ನು ಇವರ ಬರವಣಿಗೆಯಲ್ಲಿ ಕಾಣಬಹುದು. ಐತಿಹಾಸಿಕ ಘಟನೆಗಳಿಗೆ ಸಮಕಾಲಿನತೆಯನ್ನು, ಪತ್ತೇದಾರಿ ಅಂಶಗಳನ್ನು, ವಿದೇಶಿ ವ್ಯಕ್ತಿಗಳನ್ನು ಏಕ ಕಾಲಕ್ಕೆ ಕಥೆಯಲ್ಲಿ ತಂದು ಓದುಗರನ್ನು ತನ್ನ ಕಥೆಯಲ್ಲಿ ಹಿಡಿದಿಟ್ಟುಕೊಳ್ಳುವ ಶೈಲಿ ಹೆಚ್ಚು ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಅವರ ಮೊದಲ ಕಾದಂಬರಿ 'ಕನಕ ಮುಸುಕು' ಶಾತವಾಹನರ ಕಾಲದ ರಾಜಕೀಯ, ಧಾರ್ಮಿಕ ವಿಧ್ಯಮಾನಗಳನ್ನು ಕೇಂದ್ರೀಕರಿಕೊಂಡು ರಚನೆಯಾಗಿದೆ. ವಿಷ್ಣುವರ್ಧನ ಮತ್ತು ಶಾಂತಲೆಯ ವ್ಯಕ್ತಿತ್ವವನ್ನು ವಿಭಿನ್ನವಾಗಿ ಚಿತ್ರಿಸಿದ್ದಾರೆ. ಸೋಮನಾಥಪುರದಲ್ಲಿ ಕೆತ್ತಲ್ಪಟ್ಟ ಮುಸಿಕಿನ ಜೋಳದ ತೆನೆಯ ರೂಪದಲ್ಲಿರುವ ಚಿತ್ರದ ಬೆನ್ನು ಹತ್ತಿ ಹೊದ ಕಾದಂಬರಿಕಾರರಿಗೆ ಹಲವು ಸಂಗತಿಗಳು ಕಥೆಯನ್ನು ಬರೆಯಲು ಪ್ರೇರಣೆಯಾಗಿರುವುದನ್ನು ಕಥೆಯಲ್ಲಿ ಹೇಳಿಕೊಂಡಿದ್ದಾರೆ.

'ಕಪಿಲಿಪಿಸಾರ' ಕಾದಂಬರಿ ವೈಜ್ಞಾನಿಕ ಕಥೆ. ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ವ್ಯಕ್ತಿ, ಪ್ರದೇಶಗಳ ವಾಸ್ತವದ ಚಿತ್ರಣವನ್ನು ಕಾದಂಬರಿ ಒಳಗೊಂಡಿದೆ. ಮಾನವನ ಮೇಲೆ ನಿಯಂತ್ರಣ ಸಾಧಿಸುವುದು, ಆತನ ದೈಹಿಕ ಚಟುವಟಿಕೆಗಳನ್ನು ಕೋಮಾ ಸ್ಥಿತಿಯ ಮೂಲಕ ತಡೆ ಹಿಡಿದು ತಮಗೆ ಬೇಕಾದಾಗ ಆ ಸ್ಥಿತಿಯಿಂದ ಹೊರ ತಂದು ತಮ್ಮ ಸ್ವಾರ್ಥವನ್ನು ಸಾಧಿಸುವುದು. ಚೀನಾದ ದಕ್ಷಿಣ ಪ್ಯಾರಾಸೆಲ್ ದ್ವೀಪದಲ್ಲಿ ಈ ಬಗೆಯ ಮಾನವ ವಿರೋದಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆಯೇ? ಎಂಬ ವಿಷಯವನ್ನು ಕಾದಂಬರಿಯಲ್ಲಿ ಹುಡುಕಾಟ ನಡೆಸಿದ್ದಾರೆ. 'ಮೂಕ ಧಾತು' ಕಾದಂಬರಿಯಲ್ಲಿ ಬುದ್ಧ ಹೇಳಿದ ತತ್ವ ಆಸೆಯೇ ದು:ಖಕ್ಕೆ ಕಾರಣ ಎಂಬುದನ್ನು ವೈಜ್ಞಾನಿಕವಾಗಿ ಪತ್ತೆ ಹಚ್ಚುವುದು. ಅದನ್ನು ಮಾನವನ ನರ ಮಂಡಲ ವ್ಯವಸ್ಥೆಯಲ್ಲಿ ಗುರುತಿಸಿ ಅದರ ಮೇಲೆ ನಿಯಂತ್ರಣವನ್ನು ಸಾಧಿಸಿ ಇಡಿ ವಿಶ್ವವನ್ನೆ ತಮ್ಮ ಆಧಿನಕ್ಕೊಳಪಡಿಸಿಕೊಳ್ಳುವ ಪ್ರಯತ್ನದ ಸುತ್ತ ಕಥೆ ಸಾಗುತ್ತದೆ.

'ಕರಿಸಿರಿಯಾನ' ಕಾದಂಬರಿ ವಿಜಯನಗರ ಪತನವಾದ ನಂತರ ಅಲ್ಲಿಯ ಸಂಪತ್ತು ಏನಾಯಿತು ಎಂಬ ಕೂತೂಹಲವನ್ನು ಇಟ್ಟುಕೊಂಡೆ ಹಲವು ಚಾರಿತ್ರೀಕ ಘಟನೆಗಳನ್ನು ಕಾದಂಬರಿಯಲ್ಲಿ ವಿಭಿನ್ನವಾಗಿ ಮೂಡಿಸಿದ್ದಾರೆ. ಕೃಷ್ಣದೇವರಾಯನ ಆಡಳಿತ, ಬಹುಭಾಷೆಗಳ ಮೇಲಿನ ಆತನ ಪ್ರೀತಿ, ತಿರುಪತಿ ದೇವಾಲಯದ ಜೀರ್ಣೋದ್ಧಾರವಾದ ಬಗೆಯ ಕುರಿತು ಹೊಸ ಆಲೋಚನೆಗಳನ್ನು ಮೂಡಿಸುತ್ತದೆ.

'ಏಳು ರೊಟ್ಟಿಗಳು' ಕಾದಂಬರಿ ಭಾರತ ಕಂಡ ಐತಿಹಾಸಿಕ ಘಟನೆಗಳಲ್ಲಿ ಹೈದರಾಬಾದ ನಿಜಾಮರ ಆಡಳಿತ ರಾಜಕೀಯ ದೃಷ್ಟಿಯಿಂದ ಸಂಚಲನ ಮೂಡಿಸಿದೆ, ಇಂತಹ ವಂಶಸ್ಥರ ಕೊನೆ ದೊರೆ 'ಉಸ್ಮಾನ ಅಲಿಖಾನ್' ಅವನತಿಯ ನಂತರದಲ್ಲಿ ಅವರು ಗಳಿಸಿದ ಸಂಪತ್ತು ಎಲ್ಲಿಗೆ ಮತ್ತು ಏನಾಯ್ತು ಎಂಬ ರಹಸ್ಯವನ್ನು ಅತ್ಯಂತ ರೋಚಕತೆ, ಕೂತೂಹಲ, ಆಸಕ್ತಿಯನ್ನು ಓದುಗರಲ್ಲಿ ಇಮ್ಮಡಿಗೊಳಿಸುತ್ತದೆ. ಪ್ರಮುಖ ರಾಜಕೀಯ ಘಟನೆಗಳಿಗೆ ಸಂಬಂಧ ಕಲ್ಪಿಸಿ ವಸ್ತು ನಿಷ್ಟವಾಗಿ ನಿರೂಪಿಸುವ ಚಾಕಚಕ್ಯತೆಯನ್ನು ಅವರ ಕಾದಂಬರಿಗಳಲ್ಲಿ ಅದ್ಯಯನಿಸಬಹುದಾಗಿದೆ.

'ಶಿಲಾಕುಲವಲಸೆ' ಕಾದಂಬರಿ ನಮ್ಮ ಅಸ್ಥಿತ್ವವನ್ನೆ ಪ್ರಶ್ನಿಸಿಕೊಳ್ಳುವಂತಿದೆ. ಇವತ್ತಿಗೂ ಕೂಡಾ ನಾವು ಯಾರೋ ಬರೆದಿಟ್ಟ ಚರಿತ್ರೆಯನ್ನು ನಮ್ಮದೆಂಬಂತೆ ಭಾವಿಕೊಂಡು ಬದುಕುತ್ತಿದ್ದೇವೆ. ನಮ್ಮನ್ನು ದಾಸ್ಯರನಾಗಿ ಮಾಡಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಏನೆಲ್ಲ ಪ್ರಯತ್ನಗಳು ನಡೆದಿವೆ ಎಂಬುದನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಆರ್ಯರು ಮತ್ತು ದ್ರಾವಿಡರು ಭಿನ್ನ ಹೇಗಾಯಿತು? ಮೂಲದಲ್ಲಿ ಒಂದೇ ರೀತಿಯಲ್ಲಿ ಬಾಳಿ ಬದುಕಿದ ಜನರ ಮಧ್ಯ ದಿಢಿರನೇ 18ನೆ ಶತಮಾನದಲ್ಲಿ ಈ ಆರ್ಯ ವಲಸೆ ಸಿದ್ಧಾಂತ, ದಾಳಿಯ ಪರಿಕಲ್ಪನೆ ಮೂಡಿದ್ದಾದರೂ ಹೇಗೆ ಎಂಬ ಪ್ರಶ್ನೆಗಳೇ ಕಾದಂಬರಿಯ ರೂಪದಲ್ಲಿ ಚರ್ಚಿಸಲ್ಪಟ್ಟಿವೆ.

ಡಾ. ಕೆ.ಎನ್. ಗಣೇಶಯ್ಯನವರ ಕಾದಂಬರಿಗಳ ಭಾಷೆ, ಶೈಲಿ, ತಂತ್ರ, ಕಥನ ನಿರೂಪಣೆ, ಪದಗಳನ್ನು ವೈವಿಧ್ಯಮಯವಾಗಿ ಬಳಸಿರುವುದನ್ನು ಕಾಣಬಹುದು. ಅವರು ಕಾದಂಬರಿಗೆ ಬಳಿಸಿದ ಚಿತ್ರಪಟಗಳು, ನಕ್ಷೆಗಳು, ಘಟನೆಗಳ ಸಂದರ್ಭ, ಆಂಗ್ಲ ಪದಗಳ ಬಳಕೆ, ಪೂರಕ ದಾಖಲೆಗಳು, ಮೌಖಿಕ ಆಕರಗಳನ್ನು ಬಳಸಿಕೊಳ್ಳುತ್ತಾರೆ. ಪ್ರತಿಯೊಂದು ಸಂಗತಿಯನ್ನು ತುಂಬ ಭಿನ್ನವಾಗಿ ನಿರೂಪಿಸಿ ತೋರಿಸಿದ್ದಾರೆ. ಪತ್ತೆದಾರಿ, ಐತಿಹಾಸಿಕ, ಸಾಮಾಜಿಕ ಕಾದಂಬರಿ ಎಂಬೆಲ್ಲ ಬಗೆಯ ಲಕ್ಷಣಗಳನ್ನು ಒಳಗೊಂಡಿರುವ ಈ ಕಾದಂಬರಿಗಳು ಕನ್ನಡದ ವಿಶಿಷ್ಠ ಸಾಹಿತ್ಯಿಕ ಬದಲಾವಣೆಯ ಪ್ರತೀಕದಂತೆ ಮೂಡಿ ಬಂದಿದೆ.

**ಸಮಾರೋಪ**

ಆಧುನಿಕತೆ ಸಂದರ್ಭದಲ್ಲಿ ಗಣೇಶಯ್ಯನವರ ಕೃತಿಗಳು ಪ್ರಸ್ತುತ ಎನಿಸುತ್ತವೆ. ನಮ್ಮ ಕಣ್ಣ ಮುಂದೆ ನಡೆಯುವ ಘಟನೆಗಳನ್ನು ಚಾರಿತ್ರಿಕವಾಗಿ ನೋಡುವ ಮಾದರಿಯೊಂದು ಅವರ ಬರಹಗಳಲ್ಲಿ ಕಾಣುತ್ತೇವೆ. ಮಾನವನಲ್ಲಿರುವ ಲೋಭಿತನ ಅನೇಕ ಸಂಘರ್ಷಗಳಿಗೆ ಎಡೆ ಮಾಡಿಕೊಟ್ಟಿದೆ. ಅದು ಇವತ್ತಿಗೂ ಕೂಡ ಮುಂದುವರೆದಿದೆ. ಲೋಭಿತನ ಏನೆಲ್ಲ ಪರಿಣಾಮ ಬೀರಬಹುದು ಎಂಬುದನ್ನು ಅವರ ಕೃತಿಗಳಲ್ಲಿ ಅವಲೋಕಿಸಬಹುದು. ಇತಿಹಾಸದ ಘಟನೆಗಳನ್ನು ಹೀಗೂ ಕೂಡಾ ವಿಶ್ಲೇಷಿಸಬಹುದು ಎಂಬ ತರ್ಕ ಸಹೃದಯರನ್ನು ಚಿಂತನೆಗೆ ಒಳಪಡಿಸುತ್ತವೆ. ಕುತೂಹಲ, ರೋಚಕತೆ, ಸಂವೇದನಾಶೀಲತೆ ಕಾದಂರಿಯಲ್ಲಿ ಚರ್ಚೆಗೊಳಗಾಗಿವೆ. ಕನ್ನಡ ಸಾಹಿತ್ಯವು ಬೆಳವಣಿಗೆಯಾದ ಕಾಲದಿಂದ ಹಿಡಿದು ಇತ್ತೀಚಿನ ಕಾಲದವರೆಗೂ ಕನ್ನಡ ಸಾಹಿತ್ಯದಲ್ಲಿ ಆದ ಪಲ್ಲಟಗಳ ಅಧ್ಯಯನವು ನಿರಂತರವಾಗಿ ನಡೆಯುತ್ತಲೇ ಬಂದಿದೆ. ಇಂತಹ ಅಧ್ಯಯನಗಳು ಇಂದಿನ ಸಾಹಿತಿಗಳಿಗೆ ಮತ್ತು ಸಾಹಿತ್ಯಾಭಿಮಾನಿಗಳಿಗೆ ಕನ್ನಡದಲ್ಲಿ ಆದ ಬದಲಾವಣೆಗಳ ಸಮಗ್ರ ತಿಳುವಳಿಕೆ ಮೂಡುವಲ್ಲಿ ಸಹಕಾರಿಯಾಗಿವೆ